ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 18/2025**

ಚಾ.ಸಾ. **:-2**
ಪ್ರಾ.ಸಾ. **:-2**

| | |
|---|---|
| ಹೆಸರು | : ಯಶವಂತ್.ಆರ್ |
| ತಂದೆಯ ಹೆಸರು | : ರಾಮಚಂದ್ರಯ್ಯ |
| ವಯಸ್ಸು | : 28 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ನಗುವನಹಳ್ಳಿ ಗ್ರಾಮ |

ಪ್ರಮಾಣೀಕರಿಸಲಾದ ದಿನಾಂಕಃ- **21.07.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ಚನ್ನೇಗೌಡರು ನಮ್ಮ ಪಕ್ಕದ ಊರಿನವರು. ದಿನಾಂಕಃ 01.04.2025 ರಂದು ನಾನು ನಗುವನಹಳ್ಳಿಯಿಂದ ಶ್ರೀರಂಗಪಟ್ಟಣಕ್ಕೆ ಸುಮಾರು 2.00-2.30 ರ ಸಮಯದಲ್ಲಿ ಹೋಗುತ್ತಿದ್ದೆ. ಅಗ್ರಹಾರದ ಹತ್ತಿರ ಮೈಸೂರು-ಬೆಂಗಳೂರು ಹಳೆಯ ಹೆದ್ದಾರಿಯಲ್ಲಿ ಚನ್ನೇಗೌಡರು ಪೂರ್ವದಿಂದ ಪಶ್ಚಿಮಕ್ಕೆ ರಸ್ತೆಯನ್ನು ದಾಟುತ್ತಿದ್ದರು. ಒಂದು ಸ್ವಿಫ್ಟ್ ಕಾರಿನ ಹಿಂಭಾಗದಲ್ಲಿ ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ನನ್ನ ಮುಂದೆ ಹೋಗುತ್ತಿದ್ದ ಸ್ವಿಫ್ಟ್ ಕಾರು ರಸ್ತೆ ದಾಟುತ್ತಿದ್ದ ಚನ್ನೇಗೌಡರಿಗೆ ಡಿಕ್ಕಿಪಡಿಸಿರುತ್ತದೆ. ಸುಮಾರು 80 ಕಿ.ಮೀ.ವೇಗದಲ್ಲಿ ಕಾರು ಹೋಗುತ್ತಿತ್ತು. ಸುಮಾರು 50 ಮೀ. ದೂರದಿಂದ ನಾನು ಅಪಘಾತವನ್ನು ನೋಡಿರುತ್ತೇನೆ. ಹತ್ತಿರ ಹೋಗಿ ನೋಡಿದಾಗ ಚನ್ನೇಗೌಡರ ಕಾಲು ಮುರಿದಿತ್ತು. ಅಕ್ಕಪಕ್ಕದ ಊರಿನವರಿಂದ ಚನ್ನೇಗೌಡರ ಕುಟುಂಬದವರ ಫೋನ್ ನಂಬರ್ ಪಡೆದುಕೊಂಡು ಕರೆ ಮಾಡಿ ವಿಚಾರ ತಿಳಿಸಿರುತ್ತೇನೆ. ನಾನು ಮತ್ತು ಅಪಘಾತಪಡಿಸಿದ ಕಾರಿನ ಚಾಲಕ ಗಾಯಾಳುವನ್ನು

ಸದರಿ ಕಾರಿನಲ್ಲಿಯೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಕೆಲವು ದಿನಗಳ ನಂತರ ಸದರಿಯವರು ಮೃತಪಟ್ಟ ನಂತರ ಗೊತ್ತಾಗಿರುತ್ತದೆ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನನ್ನ ಜೊತೆ ಬೇರೆ ಸಾಕ್ಷಿಗಳು ಸಹ ಹಾಜರಿದ್ದರು. ಸದರಿ ಮಹಜರ್ ಸಮಯದಲ್ಲಿ ಪೊಲೀಸರು ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತಾರೆ. ಸದರಿ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಮಹಜರ್ ಸಮಯದಲ್ಲಿ ಪೊಲೀಸರು 2 ಫೋಟೋ ತೆಗೆದಿದ್ದು ಅದರಲ್ಲಿ ನನ್ನ ಮತ್ತು ಉಳಿದ ಸಾಕ್ಷಿದಾರರ ಭಾವಚಿತ್ರ ಇರುತ್ತದೆ. ಸದರಿ 2 ಫೋಟೋಗಳನ್ನು ಈಗ ಒಟ್ಟಾಗಿ ನಿಪಿ-4 ಎಂದು ಗುರುತಿಸಲಾಯಿತು.

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಅಪಘಾತ ಮಾಡಿರುತ್ತಾರೆ.

<u>ಪಾಟೀ ಸವಾಲು **:** ಆರೋಪಿ ಪರ ವಕೀಲರಿಂದ **:**</u>

ನಾನು ಶ್ರೀರಂಗಪಟ್ಟಣದ ಪೊಲೀಸ್ ಠಾಣೆಯನ್ನು ನೋಡಿರುತ್ತೇನೆ. ಅಪಘಾತದ ನಂತರ ನಾನು ಶ್ರೀರಂಗಪಟ್ಟಣಕ್ಕೆ ಬಂದಿರುತ್ತೇನೆ. ಅಪಘಾತದ ಬಗ್ಗೆ ಪೊಲೀಸರಿಗೆ ದೂರು ಕೊಡಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಮೃತರ ಮಗನಿಗೆ ದೂರವಾಣಿ ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿದ್ದರಿಂದ ಅವರೇ ದೂರು ನೀಡುತ್ತಾರೆಂದು ನಾನು ದೂರು ನೀಡಿಲ್ಲ. ನಾನು ಮೃತರ ಮಗನಿಗೆ ನಮ್ಮ ಊರನ್ನು ತಿಳಿಸಿರುತ್ತೇನೆ, ನನ್ನ ಹೆಸರು, ಸಂಪೂರ್ಣ ವಿಳಾಸವನ್ನು ಹೇಳಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ, ಸಾಕ್ಷಿಯು ಮುಂದುವರೆದು ಮಹಜರ್ ಮಾಡುವಾಗ ಹೇಳಿಕೆ ಕೊಟ್ಟಿರುತ್ತೇನೆ. ಅಪಘಾತದ ಬಗ್ಗೆ ವೈದರಿಗೆ ನಾನು ಮಾಹಿತಿ ನೀಡಿರುತ್ತೇನೆ. ನಾನು ಸದರಿಯವರನ್ನು ದಾಖಲು ಮಾಡಿಲ್ಲ ಹಾಗೂ ಮೃತರ ಅಳಿಯ ಅವರನ್ನು ಆಸ್ಪತ್ರೆಗೆ ದಾಖಲು ಮಾಡಿದ್ದು, ಅಪರಿಚಿತ ವಾಹನ ಗುದ್ದಿರುತ್ತದೆ ಎಂದು ವೈದ್ಯರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಂಬಂಧದಲ್ಲಿ ಮೃತರಿಗೆ ಅಳಿಯ ಆಗಬೇಕು ಎಂದರೆ ಸರಿಯಲ್ಲ. ಅಪಘಾತದ

ಸಮಯದಲ್ಲಿ ನಾನು ಯಾವ ಜಾಗದಲ್ಲಿ ಇದ್ದೆ ಎಂದು ನಿಪಿ-3 ರಲ್ಲಿ ಪೊಲೀಸರಿಗೆ ತೋರಿಸಿರುತ್ತೇನೆ. ನಿಪಿ-3 ರಲ್ಲಿ ನನ್ನ ಸಹಿ ಇಲ್ಲ. ಅಪಘಾತ ಸ್ಥಳದಲ್ಲಿ ರಸ್ತೆಯನ್ನು ದಾಟಲು ಅವಕಾಶವಿರುವುದಿಲ್ಲ, ಸ್ವಲ್ಪ ಮುಂದೆ ಇರುತ್ತದೆ. ಅಪಘಾತ ಸ್ಥಳದಲ್ಲಿ ಸಾಕಷ್ಟು ಜನರು ಸೇರಿದ್ದರು ಎಂದರೆ ಸಾಕ್ಷಿ ಮಧ್ಯಾಹ್ನದ ಸಮಯವಾಗಿದ್ದರಿಂದ ಯಾರು ಇರಲಿಲ್ಲ ಎನ್ನುತ್ತಾರೆ.

ನಂಜುಂಡೇಶ್ವರ ಕೂಲ್ ಪಾರ್ಲರ್ ಬಳಿ ಜನರು ಇದ್ದರು. ಆರೋಪಿ ಆ ಸಮಯದಲ್ಲಿ ನಾನು ಹೇಳಿದಂತೆ ವೇಗವಾಗಿ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಯಾವುದೋ ಅಪರಿಚಿತ ವಾಹನ ಚನ್ನೇಗೌಡರಿಗೆ ಡಿಕ್ಕಿಪಡಿಸಿದ್ದು, ಆರೋಪಿಯ ವಾಹನ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅದೇ ರಸ್ತೆಯಲ್ಲಿ ಬರುತ್ತಿದ್ದು, ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹಿಯನ್ನು ಪೊಲೀಸ್ ಠಾಣೆಯ ಬಳಿ ಮಾಡಿರುತ್ತೇನೆ ಎಂದರೆ ಸುಳ್ಳು.

ಮೃತರ ಕುಟುಂಬದವರು ನನಗೆ ಪರಿಚಯವಿರುವ ಕಾರಣ ಅವರಿಗೆ ವಿಮೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ **:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**